ಒಂದು ಪತ್ರವನ್ನು ತಮಗೆ ತಲುಪಿಸಿದ್ದೇವೆ. ಆದರ ವಿಚಾರ ಏನೆಂದರೆ, ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾ....

ಅಧ್ಯಕ್ಷರು:- ಬೈರೇಗೌಡರವರೇ, ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ. ನಾನು ಒಂದು ರೂಲಿಂಗ್ ಕೊಡಬೇಕಾಗಿದ್ದು, ಆದಾದ ನಂತರ ತಮ್ಮ ವಿಚಾರವನ್ನು ಹೇಳಿ. I now give the Ruling:

RULING BY THE CHAIR

MR. SPEAKER:- Sri K.Lakkappa, Hon'ble Member of this House has given notice under Rule 190 of the Rules of procedure and Conduct of Business in the Karnataka Legislative Assembly to raise a question involving breach of privilege either of a Member of the House.

In his notice Sri. K.Lakkappa has stated that, according to the information published in the newspaper, Sri Ramakrishna Hegde, a Member of this House, has committed breach of privilege by getting the phones of certain persons tapped and tampering papers in respect of the telephone tapping. Recently a communication was sent by the Chief Secretary to the Rajya Sabha Subordinate Committee. According to it, Sri Ramakrishna Hegde has instructed the then CHIEF SECRETARY to intercept the telephone of certain persons. This would not only violate the provisions of the Indian Telegraph Act, but also the Indian Official Secrets Act. He has requested for admission of the notice and for provising an opportunity for discussion.

Under Rule 190 of the said Rules, a Member may with the consent of the Spearker raise a question involving a breach of privilege either of a Member or of the House or of the Committee thereof. Rule 192 of the Rules prescribes certain conditions for raising questions of privilege. It provides that the right to raise a question of privileges shall be governed by the following conditions viz.

(i) not more than one question shall be raised at the same sitting:

(ii) the question shall be restricted to a specific matter of recent occurrence:

(iii) the matter requires the intervention of the House.

The notice in question does not satisfy the condition that a question shall be restricted to a specific matter of recent occurance. It is alleged that Sri Ramakrishna Hegda got telephones of certain persons tapped when he was the Chief Minister of the State. This was more than two years ago. The alleged phone tapping is not a matter of recent occurance. This ground alone is sufficient to reject the notice given by Sri Lakkappa.

Interception of telephone is authorised under Section 5 of the Telegraph Act in certain special circumstances provided in that Section. Whether interception of a telephone of a Member of Parliament raises the question of breach of privilege came to be considered before Lok Sabha.

The Hon'ble Speaker Sri N.A.Iyengar and Dr.Balram Jakhar have ruled that interception of a telephone of Members may not give rise to a question of privilege. In this connection, a reference may be made to Privilege Digest Volume IV page 35 and Privilege Digest April - October 1981 Volume XXVI. It is clear from these rulings that even assuming that the phones of Members of this House were tapped at the instance of Sri Ramakrishna Hegde, he cannot be said to have committed breach of privilege of the Members of the House.

It has to be noted that Sri Lakkappa has not even alleged in his notice that at the instance of Sri Ramakrishna Hegde, the phones of certain Members of this House were tapped. What he has stated in his notice is that phones of certain persons were got tapped by Sri Ramakrishna Hegde through the Chief Secretary. In the absence of a clear allegation it cannot be presumed that it is his case that phones of certain members of this House were tapped.

In the circumstances, I hold that there is not even a prima-facie case of breach of privilege either of a Member or the House or the Committee thereof.

The notice is, therefore, rejected.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಮತ್ತು ಶ್ರೀಮಾನ್ ಏಕಾಂತಯ್ಯನವರು ತಮಗೆ ಒಂದು ಪತ್ರವನ್ನು ಕಳುಹಿಸಿದ್ದೇವೆ. ಅದು ನಮ್ಮ ನಡವಳಿಕೆ 190ರ ಕಲಮಿನ ಪ್ರಕಾರ ಕಳುಹಿಸಿದ್ದೇವೆ. ವಿಷಯ ಏನೆಂದರೆ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರ ಕೊಡುತ್ತಿರತಕ್ಕಂಥ ಸಂದರ್ಭದಲ್ಲಿ "ಹಿಂದಿನ ಜನತಾ ದಳದ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತದ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿಯಲ್ಲಿ ಬೆಳೆದುಕೊಂಡು ಬಂದಂಥ ಅನೇಕ ಜನ ಆವಾಗಿನ ಶಾಸಕರು ಇವತ್ತು ಬಹಳ ಕಡಿಮೆ ಇಲ್ಲಿ ಕಾಣಿಸುತ್ತಿದ್ದಾರೆ, ಜನ ಅವರಿಗೆ ಪಾಠ ಕಲಿಸಿದ್ದಾರೆ, ನಾನು ಎವೆರಿ ಲೆಜಿಸ್ಲೇಟರ್ ಎಂದು ಹೇಳಲಿಲ್ಲ, ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಒಂದು ಉದ್ಯೋಗ ಮಾಡಿಕೊಂಡಿದ್ದರು" ಎಂದು ಮುಂತಾಗಿ ನಿನ್ನೆ ದಿವಸ ಹೇಳಿದ್ದಾರೆ. ಇದನ್ನು ಮಾತನಾಡಿದಂಥ ಸಂದರ್ಭದಲ್ಲಿ ಕೂಡಾ ಕುರಿತು ಪ್ರಸ್ತಾಪ ಮಾಡಿದೆ. ಸ್ವಾಮಿ, ತಾವು ಸಾರಾಸಗಟಾಗಿ ಎಲ್ಲಾ ಸದಸ್ಯರನ್ನು ಕೂಡಾ ಕುರಿತು ಹೇಳಿದರೆ ಅದು ಆಗುವುದಿಲ್ಲ ಎಂದು ಹೇಳಿದೆ. ಅದಕ್ಕೆ ಸದನದ ಎಲ್ಲಾ ಸದಸ್ಯರನ್ನು ಕುರಿತು ಹೇಳುತ್ತಿಲ್ಲ ಎನ್ನತಕ್ಕಂಥ ಮಾತನ್ನು ಕೂಡಾ ನಿನ್ನೆ ದಿವಸ ಹೇಳಿದ್ದಾರೆ. ಆದರೆ ನಾನು ಇಲ್ಲಿ ಹೇಳತಕ್ಕಂಥಾದ್ದು ಏನೆಂದರೆ, ಆದರೂ ಎಲ್ಲಾ ಸದಸ್ಯರು ಇಲ್ಲದೇ ಇದ್ದರೂ ಕೆಲವು ಸದಸ್ಯರ ಮೇಲಾದರೂ ಕೂಡಾ ಆರೋಪ ಇದೆ. ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. "ಲಕ್ಷಾಂತರ ರೂಪಾಯಿ ಹಣವನ್ನು ಗಳಿಸಿದ್ದಾರೆ" ಎನ್ನತಕ್ಕಂಥದ್ದು ಇದರಲ್ಲಿ ಕಡತದಲ್ಲಿ ಏನು ಇದೆಯೊ ಅದನ್ನು ನಾನು ಹೇಳುತ್ತಾ ಇರತಕ್ಕಂಥಾದ್ದು. ಇಂಡಸ್ಟ್ರಿ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಸ್ವಾಮಿ, ನಾನು ಆಗಲೇ ಚರ್ಚೆಯಲ್ಲಿ ಭಾಗವಹಿಸಿದಾಗ ಕೂಡಾ ಹೇಳಿದ್ದೇನೆ.

ಶ್ರೀ ಬಿ.ಎಂ. ಮಂಜುನಾಥ:- ವಾದಕ್ಕೆ ಬನ್ನಿ. ನಾಚಿಕೆಪಡಬೇಕು, ಏತಕ್ಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಅದಕ್ಕೇ ಹೇಳುತ್ತಿದ್ದೇನೆ. ನಾನು ಮಾತನಾಡುವಾಗ ಆಗಲೇ ಹೇಳಿದ್ದೇನೆ. ಅವರು ಯಾರೇ ಇರಲಿ, ಅವರು ಈ ಕಡೆ ಸದಸ್ಯರು ಇರಬಹುದು, ಆ ಕಡೆ ಸದಸ್ಯರು ಇರಬಹುದು, ಯಾರೇ ಇರಬಹುದು, ಅವರ ಮೇಲೆ ಈ ರೀತಿ ಏನಾದರೂ ಕೂಡಾ ಆರೋಪ ಇದ್ದರೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಆಗಲೇ ಹೇಳಿದ್ದೇನೆ..

ಅಧ್ಯಕ್ಷರು:- ತೆಗೆದುಕೊಳ್ಳುತ್ತಾರೆ ಬಿಡಿ.

ಶ್ರೀ ಸಿ. ಬೈರೇಗೌಡ:- ಈಗಲೂ ಕೂಡಾ ಯಾರು ಆ ಸದಸ್ಯರು ಎಂದು ಸರ್ಕಾರ ಹೇಳಬೇಕಾಗುತ್ತದೆ. ತಾವು ದಯವಿಟ್ಟು ಈ ವಿಚಾರವನ್ನು ತೀವ್ರವಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ಬರೆದು ಕಳುಹಿಸಿಕೊಡಿ. ಅದನ್ನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಬರೆದು ಕಳುಹಿಸಿದ್ದೇವೆ. ತಾವು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾಳೆ ಅವಕಾಶ ಕೊಡಬೇಕು. ನಾನು ಮತ್ತು ವಿಕಾಂತಯ್ಯನವರು ಬರೆದು ಕಳುಹಿಸಿದ್ದೇವೆ. ದಯವಿಟ್ಟು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು:- ಈಗ ಸಭೆ ಮುಂದುವರಿದು ನಾಳೆ ಬೆಳಿಗ್ಗೆ 9-30ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು 7-20ಕ್ಕೆ ಮುಕ್ತಾಯಗೊಂಡು, ಮತ್ತೆ ದಿನಾಂಕ 18-7-1990 ರಂದು ಬುಧವಾರ ಬೆಳಿಗ್ಗೆ 9-30 ಗಂಟೆಗೆ ಸೇರಲು ನಿಶ್ಚಯಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)